ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ 24-10-2017.**

**ಪಾಟೀ ಸವಾಲು ಶ್ರೀ ಎಸ್.ಎಸ್.ಪಿ, ಪ್ರತಿವಾದಿಯರ ಪರ ವಕೀಲರಿಂದ.**

ನನ್ನ ವಾಸ ಸ್ಥಳದಿಂದ ದಾವಾ ಸ್ವತ್ತು ಸುಮಾರು 3 ರಿಂದ 3 ವರೆ ಕಿ.ಮೀ ಅಂತರ ಇದೆ. ದಾವಾ ಸ್ವತ್ತು ಶ್ರವಣಬೆಳಗೊಳ ಮತ್ತು ಹಿರಿಸಾವೆಯ ಮುಖ್ಯ ರಸ್ತೆ ಇದೆ ಎಂದರೆ ಸರಿ. ಪ್ರತಿವಾದಿ ದಾವಾ ಸ್ವತ್ತಿನಲ್ಲಿ 1999 ರ ಇಸವಿಯಲ್ಲಿ ಲೈಸನ್ಸ್ ಪಡೆದು ಮೂರು ಅಂಗಡಿ ಮಳಿಗೆಗಳನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿಯು ಯಾವಾಗ ಕಟ್ಟಿದ್ದಾರೆ ಎಂದು ಗೊತ್ತಿಲ್ಲ. ಸದರಿ ಅಂಗಡಿಗಳ ಹಿಂಭಾಗಕ್ಕೆ ಉಳಿದ ಜಾಗದಲ್ಲಿ ತಳಪಾಯ ಹಾಕಿದ್ದಾರೆ ಎಂದರೆ ಸರಿ. ಸದರಿ ತಳಪಾಯವನ್ನು ಯಾವಾಗ ಹಾಕಿದ್ದಾರೆ ಎಂದು ಗೊತ್ತಿಲ್ಲ. ಸದರಿ ಅಂಗಡಿ ಮಳಿಗೆಗಳನ್ನು 2000 ಇಸವಿಯಲ್ಲಿ ಬಾಡಿಗೆಗೆ ನೀಡಿದ್ದಾರೆ ಆದರೆ, ಯಾವಾಗ ನೀಡಿದ್ದಾರೆ ಎಂದು ಗೊತ್ತಿಲ್ಲ. ಸದರಿ ಅಂಗಡಿಗಳಲ್ಲಿ ನಾನು ಮೊದಲಿನಿಂದಲೂ ದಿನನಿತ್ಯದ ಸಾಮಾನುಗಳನ್ನು ಖರೀದಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು 2013ನೇ ಸಾಲಿನವರೆಗೆ ದಾವಾ ಸ್ವತ್ತಿನ ಕಡೆಗೆ ಹೋಗಿಲ್ಲ. ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟಿರುವ ವಿಚಾರ ನನಗೆ ಚನ್ನಾಗಿ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಕಟ್ಟಡವನ್ನು ನನ್ನ ಗಮನಕ್ಕೆ ಬಂದ ಎಷ್ಟು ವರ್ಷಗಳ ಹಿಂದೆ ಕಟ್ಟಿದ್ದಾರೆ ಎಂದು ಹೇಳಲು ಆಗುವುದಿಲ್ಲ. 1997ನೇ ಇಸವಿಯಲ್ಲಿ ಪ್ರತಿವಾದಿ ದಾವಾ ಸ್ವತ್ತಿಗೆ ಕಂದಾಯ ಕಟ್ಟಿ ಖಾತೆ ಮಾಡಿಸಿಕೊಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು 1994ನೇ ಸಾಲಿನಲ್ಲಿ ಕಂದಾಯ ಪಾವತಿಸುತ್ತಿದ್ದು. 1994ನೇ ನಂತರ ನಾನು ಹೋಗಿಲ್ಲ. ದಾವಾ ಸ್ವತ್ತಿಗೆ ಸಂಬಂದಿಸಿದ ದಾಖಲಾತಿಗಳನ್ನು ನಾನು ಪರಿಶೀಲಿಸಿಲ್ಲ.

***ಮುಂದುವರೆದು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.***

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ